ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/83/2013-14. ದಿನಾಂಕ 17-10-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕರಿನಾಗಪ್ಪ ತಂದೆ ಲೇಟ್ ಕರಿಯಪ್ಪ ಉರುಫ್ ಪೂಜಾರಿ<br>2)ಬಡನಾಗಪ್ಪ ತಂದೆ ಲೇಟ್ ಅಜ್ಜಪ್ಪ ಉರುಫ್ ಪೂಜಾರಿ<br>3)ತುಪ್ಪಲ ನಾಗಪ್ಪ ತಂದೆ ಲೇಟ್ ಅಜ್ಜಪ್ಪ ಉರುಫ್ ಪೂಜಾರಿ<br>4)ಅಜ್ಜಪ್ಪ ಸಾಹುಕಾರ ತಂದೆ ಲೇಟ್ ಅಜ್ಜಪ್ಪ ಉರುಫ್ ಪೂಜಾರಿ<br>ಕುದರೆಡವು ಗೊಲ್ಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕರಿನಾಗಪ್ಪ ತಂದೆ ಬಡಮುದ್ದಪ್ಪ<br>ಕುದರೆಡವು ಗೊಲ್ಲರಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 18. ವಿಸ್ತೀರ್ಣ 14-65.. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 18. ವಿಸ್ತೀರ್ಣ 14-65.. ಎಕ್ರೆ ಜಮೀನನ್ನು ಸದರಿ ತಾಲೂಕು ಕುದರೆಡವು ಗೊಲ್ಲರಹಟ್ಟಿ ಗ್ರಾಮದ ಕರಿನಾಗಪ್ಪ ತಂದೆ ಲೇಟ್ ಕರಿಯಪ್ಪ. ಉರುಫ್ ಪೂಜಾರಿ ಇವರು ದಿನಾಂಕ 28-12-2012 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕುದರೆಡವು ಇವರು ನಮೂನೆ-21 ನೋಟಿಸನ್ನು ದಿನಾಂಕ 19-01-2013. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಕುದರೆಡವು ಗೊಲ್ಲರಹಟ್ಟಿ ಗ್ರಾಮದ ಕರಿನಾಗಪ್ಪ ತಂದೆ ಬಡಮುದ್ದಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 04/2012-13. ದಿನಾಂಕ 26-02-2013. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 15-10-2013 ರಿಂದ 17-10-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕುದರೆಡವು ಗ್ರಾಮದ ಸನಂ 18. ವಿಸ್ತೀರ್ಣ 14-65.. ಎಕ್ರೆ ಜಮೀನು ಈ ಹಿಂದೆ ಕರಿಯಪ್ಪ ತಂದೆ ಅಜ್ಜಪ್ಪ. ನಾಗಪ್ಪ ತಂದೆ ಕರಿಯಪ್ಪ. ಮುದ್ದಪ್ಪ ತಂದೆ ಕರಿಯಪ್ಪ. ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇದ್ದು ಪ್ರತಿವಾದಿಯಾದ

ಪು.ತಿ.ನೋ:-2.

ಕರಿನಾಗಪ್ಪ ತಂದೆ ಬಡಮುದ್ದಪ್ಪ ಇವರ ಹೆಸರಲ್ಲಿ ಎಂ.ಆರ್.ನಂಬರ್: 03/2006-07 ರ ಪ್ರಕಾರ ಪೋತಿವಾರಸು ಹಕ್ಕಿನಂತೆ ಹಕ್ಕು ಬದಲಾವಣೆಯಾಗಿದೆ. ಸದರಿ ಕರಿನಾಗಪ್ಪ ತಂದೆ ಬಡಮುದ್ದಪ್ಪ ಇವರು ದಿನಾಂಕ 28-12-2012 ರಂದು ತನ್ನ ಖಾಸಾ ಚಿಕ್ಕಪ್ಪನ ಮಕ್ಕಳ ಹೆಸರಲ್ಲಿ ಪಾಲು ವಿಭಾಗದ ಒಪ್ಪಿಗೆ ಪತ್ರವನ್ನು ಬರೆಯಿಸಿ ಕೊಟ್ಟಿರುತ್ತಾರೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಪ್ರತಿವಾದಿಯಾದ ಬಡಮುದ್ದಪ್ಪ, ಹಾಗೂ ಅಜ್ಜಪ್ಪ ಇವರು ಮೌಖಿಕವಾಗಿ ಪಾಲು ವಿಭಾಗವಾಗಿರುತ್ತಾರೆ. ಸದರಿ ಜಮೀನು ಪ್ರತಿವಾದಿಯ ತಂದೆಯ ಪಾಲು ಇದ್ದು ಹಾಗೂ ಸ್ವಾದೀನ ಅನುಭವವನ್ನು ಹೊಂದಿರುತ್ತಾರೆ. ಪ್ರತಿವಾದಿಯ ತಂದೆ ನಿಧನ ಹೊಂದಿದ ನಂತರ ಪೋತಿವಾರಸು ಪ್ರಕಾರ ಎಂ.ಆರ್.ನಂಬರ್: 03/2006-07 ದಿನಾಂಕ 09-01-2007 ರಲ್ಲಿ ಪ್ರತಿವಾದಿಯ ಹೆಸರಲ್ಲಿ ಹಕ್ಕು ಬದಲಾವಣೆಯಾಗಿದೆ. ಅದರ ಪ್ರಕಾರ ಪಹಣಿಯಲ್ಲಿ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ. ಹಾಗೂ ಸದರಿ ಜಮೀನು 28-12-2014 ರಲ್ಲಿ ಪಾಲು ವಿಭಾಗದ ಪತ್ರವು ನೊಂದಣಿ ರಹಿತ ಪತ್ರವಾಗಿರುತ್ತದೆ. ಹಾಗೂ ಸದರಿ ಜಮೀನಿನ ವಿವಾದವು ಕೂಡ್ಲಿಗಿಯ ಸಿವಿಲ್ ನ್ಯಾಯಾಲಯ ಓ.ಎಸ್.ನಂಬರ್: 54/2013 ರಲ್ಲಿ ವಿಚಾರಣೆಗಾಗಿ ಬಾಕಿ ಇರುತ್ತದೆ.
ಈ ಎಲ್ಲಾ ಕಾರಣಗಳಿಂದ ವಾದಿಗಳು ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರತಿವಾದಿಗೆ ನ್ಯಾಯಾ ದೊರೆಕಿಸಿ ಕೊಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ವಾದಿಗಳು ಮಂಡಿಸಿದ ದಾಖಲೆ ಮತ್ತು ಪ್ರತಿವಾದಿಗಳು ಸಲ್ಲಿಸಿದ ದಾಖಲೆ ಸದರಿ ಜಮೀನಿನ ಹಕ್ಕಿನ ಬಗ್ಗೆ ತಿರ್ಮಾನ ಕೈಗೊಳ್ಳಬೇಕಾಗಿರುವುದರಿಂದ ಹಾಗೂ ಸದರಿ ಜಮೀನಿನ ವಿವಾದವು ಕೂಡ್ಲಿಗಿಯ ಸಿವಿಲ್ ನ್ಯಾಯಾಲಯ ಓ.ಎಸ್.ನಂಬರ್: 54/2013 ರಲ್ಲಿ ಪ್ರಕರಣ ದಾಖಲೆಯಾಗಿ ಇತ್ಯರ್ಥಕ್ಕಾಗಿ ಬಾಕಿ ಇರುವುದು ಕಂಡು ಬಂದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕುದರೆಡವು ಗ್ರಾಮದ ಸನಂ 18. ವಿಸ್ತೀರ್ಣ 14-65.. ಎಕ್ರೆ ಜಮೀನಿನ ಹಕ್ಕಿನ ಬಗ್ಗೆ ತಿರ್ಮಾನ ಕೈಗೊಳ್ಳಬೇಕಾಗಿರುವುದರಿಂದ ಹಾಗೂ ಸದರಿ ಜಮೀನಿನ ವಿವಾದವು ಕೂಡ್ಲಿಗಿಯ ಸಿವಿಲ್ ನ್ಯಾಯಾಲಯ ಓ.ಎಸ್.ನಂಬರ್: 54/2013 ರಲ್ಲಿ ವಿಚಾರಣೆಗಾಗಿ ಬಾಕಿ ಇರುವುದರಿಂದ ಅರ್ಜಿದಾರರು ಕೋರಿರುವ ಅರ್ಜಿಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿಯಂತೆ ಮುಂದುರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.
ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 17-10-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ.
ಗುಡೇಕೋಟೆ-3.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕರಿನಾಗಪ್ಪ ತಂದೆ ಲೇಟ್ ಕರಿಯಪ್ಪ ಉರುಫ್ ಪೂಜಾರಿ ಹಾಗೂ ಇತರರು ಕುದರೆಡವು ಗೊಲ್ಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎ.ಶರಣಪ್ಪ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಕರಿನಾಗಪ್ಪ ತಂದೆ ಬಡಮುದ್ದಪ್ಪ ಕುದರೆಡವು ಗೊಲ್ಲರಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಬಿ. ಪ್ರಕಾಶ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.